ವಿದ್ಯಾರ್ಥಿಗಳಿಗಾಗಿ ವಿವೇಕಾನಂದರು

ಆತ್ಮವಿಶ್ವಾಸ



ನಿಮ್ಮಲ್ಲಿ ಎಲ್ಲವೂ ಇದೆ. ಎಲ್ಲಾ ಗ್ರಂಥಗಳಲ್ಲಿರುವ ಜ್ಞಾನಕ್ಕಿಂತಲೂ ಸಾವಿರಪಟ್ಟು ಜ್ಞಾನ ನಿಮ್ಮಲ್ಲಿಯೇ ಅಡಗಿದೆ. ನಿಮ್ಮಲ್ಲಿ ಶ್ರದ್ಧೆಯನ್ನು ಎಂದಿಗೂ ಕಳೆದುಕೊಳ್ಳಬೇಡಿ. ಈ ಜಗತ್ತಿನಲ್ಲಿ ನೀವು ಏನನ್ನು ಬೇಕಾದರೂ ಸಾಧಿಸಬಲ್ಲಿರಿ. ಎಂದೂ ದುರ್ಬಲರಾಗಬೇಡಿ. ಎಲ್ಲ ಬಗೆಯ ಶಕ್ತಿಯೂ ನಿಮ್ಮದೇ ಆಗಿದೆ.

ಪ್ರತಿಯೊಬ್ಬ ಮನುಷ್ಯನನ್ನೂ, ಪ್ರತಿಯೊಂದು ದೇಶವನ್ನೂ ಶ್ರೇಷ್ಠವನ್ನಾಗಿ ಮಾಡುವುದಕ್ಕೆ ಮೂರು ಸಂಗತಿಗಳು ಅತ್ಯವಶ್ಯ:

೧. ಒಳ್ಳೆಯತನದ ಶಕ್ತಿಯಲ್ಲಿ ನಿಶ್ಚಯಭಾವ.

೨. ಹೊಟ್ಟೆಕಿಚ್ಚು ಮತ್ತು ಅನುಮಾನಗಳು ಇಲ್ಲದಿರುವುದು.

೩. ಒಳ್ಳೆಯವರಾಗಲು ಮತ್ತು ಒಳ್ಳೆಯದನ್ನು ಮಾಡಲು ಪ್ರಯತ್ನಿಸುತ್ತಿರುವ ಎಲ್ಲರಿಗೂ ಸಹಾಯ ಮಾಡುವುದು.

ನೀವೇ ನಿಮ್ಮ ಭವಿಷ್ಯದ ನಿರ್ಮಾಪಕರು. ನೀವೇ ನಿಮ್ಮನ್ನು ಕಷ್ಟಪಡುವಂತೆ ಮಾಡಿಕೊಳ್ಳುತ್ತೀರಿ, ಒಳಿತು ಕೆಡುಕುಗಳನ್ನು ಮಾಡಿಕೊಳ್ಳುವವರೂ ನೀವೇ. ನಿಮ್ಮ ಕಣ್ಣನ್ನು ಕೈಗಳಿಂದ ಮುಚ್ಚಿಕೊಂಡು, ಕತ್ತಲೆ ಎಂದು ಹೇಳಿಕೊಳ್ಳುತ್ತೀರಿ. ನಿಮ್ಮ ಕೈಗಳನ್ನು ಅತ್ತ ಸರಿಸಿ, ಬೆಳಕನ್ನು ನೋಡಿ.

ಯಾವುದಕ್ಕೂ ಹೆದರದಿರಿ. ನೀವು ಅದ್ಭುತವಾದ ಕಾರ್ಯವನ್ನು ಎಸಗುತ್ತೀರಿ. ನೀವು ಹೆದರಿದ ಕ್ಷಣ, ಏನೂ ಇಲ್ಲವಾಗಿಬಿಡುತ್ತೀರಿ. ಜಗತ್ತಿನಲ್ಲಿ ಭಯವೇ ಎಲ್ಲ ಸಂಕಷ್ಟದ ದೊಡ್ಡ ಕಾರಣ. ನಮ್ಮೆಲ್ಲ ಕಷ್ಟಗಳಿಗೂ ಭಯವೇ ಕಾರಣ. ನಿರ್ಭೀತಿಯು ಈ ಕ್ಷಣದಲ್ಲಿ ಸ್ವರ್ಗವನ್ನೇ ನಿರ್ಮಾಣಮಾಡುತ್ತದೆ.

ನಿಮ್ಮನ್ನು ನೀವು ಮಹಾನ್ ವ್ಯಕ್ತಿಗಳೆಂದು ಭಾವಿಸಿಕೊಳ್ಳಿ. ಆಗ ನೀವು ಮಹಾನ್ ವ್ಯಕ್ತಿಗಳಾಗುತ್ತೀರಿ. ನಮ್ಮೆಲ್ಲರಲ್ಲೂ ಒಂದೇ ಜ್ವಾಜ್ವಲ್ಯವಾದ ಆತ್ಮವು ಇರುವುದು. ಅದರಲ್ಲಿ ನಾವು ನಂಬಿಕೆಯನ್ನು ಇಟ್ಟುಕೊಳ್ಳೋಣ.

ನೀನು ಏನನ್ನು ಚಿಂತಿಸುತ್ತೀಯೋ, ಹಾಗೆಯೇ ಆಗುತ್ತೀಯೆ. ನಿನ್ನನ್ನು ನೀನು 'ದುರ್ಬಲ'ನೆಂದು ಭಾವಿಸಿಕೊಂಡರೆ, ನೀನು ದುರ್ಬಲನೇ ಆಗುತ್ತೀಯೆ. ನಿನ್ನನ್ನು ನೀನು 'ಸಶಕ್ತ' ನೆಂದು ಭಾವಿಸಿಕೊಂಡರೆ, ನೀನು ಸಶಕ್ತನೇ ಆಗುತ್ತೀಯೆ.

ಯುವ ಕುಶಲೋಪರಿ

ಪ್ರಶ್ನೆ : ನಾಯಕತ್ವದ ಗುಣಗಳಾವುವು ?

ಉತ್ತರ : ತಾನು ಯಾವಾಗಲೂ ಮುಂದಿದ್ದು ಆದರ್ಶ ಮೆರೆಯುವವನೇ ನಿಜವಾದ ನಾಯಕ. ನಾಯಕನು ತನ್ನ ಮಾತುಗಳಿಂದ ಮಾತ್ರವೇ ಪ್ರೇರೇಪಣೆ ನೀಡುವುದಿಲ್ಲ. ತನ್ನ ನಡೆ, ನುಡಿಗಳಿಂದ ಇತರರಿಗೆ ಪ್ರೇರಣಾದಾಯಕ ಶಕ್ತಿಯಾಗುತ್ತಾನೆ. ನೈತಿಕತೆ, ಪ್ರಾಮಾಣಿಕತೆ, ನಿಷ್ಪಕ್ಷಪಾತ ನಿರ್ಧಾರ, ಉಲ್ಲಾಸಕರ ವ್ಯಕ್ತಿತ್ವ, ಚುರುಕಾದ ಬುದ್ಧಿಶಕ್ತಿ, ಎಡೆಬಿಡದೆ ಕಾರ್ಯವೆಸಗುವ ಸಾಮರ್ಥ್ಯ, ಇತರರಲ್ಲಿ ಕ್ಷಮೆ, ಎಲ್ಲರ ಸಹಾಯಕ್ಕೆ ಮುಂದಾಗುವುದು – ಇವು ನಾಯಕತ್ವಕ್ಕೆ ಮೆರಗುನೀಡುವ ಕೆಲವು ಉತ್ತಮ ಗುಣಗಳು. ನಾಯಕತ್ವವು ಅಂತರಂಗದ ಶಕ್ತಿಯಿಂದ ಮೂಡಿಬರುವ ವಿಶಿಷ್ಟ ಗುಣವೇ ಹೊರತು, ಬರೆದು ಓದಿ ಗಳಿಸಿಕೊಳ್ಳುವಂಥದಲ್ಲ. ಆದರ್ಶ ವ್ಯಕ್ತಿತ್ವ ಮತ್ತು ಪ್ರಾಮಾಣಿಕತೆಗಳೇ ನಾಯಕತ್ವದ ತಿರುಳು. ಸ್ವಾರ್ಥಿಯಾದವನು ಎಂದಿಗೂ ಒಳ್ಳೆಯ ನಾಯಕನಾಗಲು ಅಸಾಧ್ಯ. ತನ್ನ ಕೆಳಗೆ ಇರುವವರ ಒಳಿತಿಗಾಗಿ ಯಾವುದೇ ತ್ಯಾಗಕ್ಕಾದರೂ ಸಿದ್ಧನಾಗಿರುವವನೇ ನಿಜವಾದ ನಾಯಕ.

ಒಳ್ಳೆಯ ನಾಯಕನಾಗಲು ಇಚ್ಛಿಸುವವರು ಮೊದಲು ಒಳ್ಳೆಯ ಜೀವನವನ್ನು ನಡೆಸಬೇಕು, ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಬೇಕು. ಶ್ರೀರಾಮಚಂದ್ರ, ಶ್ರೀಕೃಷ್ಣ, ಬುದ್ಧ, ಕ್ರಿಸ್ತ, ಬಸವಣ್ಣನವರು, ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ರಮಣ ಮಹರ್ಷಿಗಳು, ಸುಭಾಷ್ ಚಂದ್ರ ಬೋಸ್, ಶ್ರೀಅರವಿಂದರು – ಇವರೆಲ್ಲರೂ ಮಹಾನ್ ನಾಯಕರಾಗಿದ್ದರು. ಇಂಥವರ ಜೀವನದ ಅಧ್ಯಯನ ನಮಗೆ ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಮಾಡುತ್ತದೆ. ಇಂದಿನ ಕಾಲದಲ್ಲಿ, ಒಳ್ಳೆಯ ನಾಯಕನಾಗಬಲ್ಲವನೇ ಉತ್ತಮ ಉದ್ಯೋಗಾವಕಾಶವನ್ನು ಪಡೆಯಬಲ್ಲ. ತನ್ನ ಸಂಸ್ಥೆಯ ಸಲುವಾಗಿ, ತನ್ನ ಸ್ವಾರ್ಥವನ್ನು ಬದಿಗಿಟ್ಟು, ತನ್ನ ಕೈಕೆಳಗೆ ಕೆಲಸಮಾಡುವವರನ್ನು ಹುರಿದುಂಬಿಸುತ್ತಾ, ಉತ್ಸಾದನೆಯನ್ನು ಹೆಚ್ಚಿಸುವತ್ತ ಕಾರ್ಯೋನ್ಮುಖನಾಗುವವನನ್ನು ಎಲ್ಲರೂ ಬಯಸುತ್ತಾರೆ. ಇಂತಹ ಉತ್ಸಾಹಿ, ಆತ್ಮವಿಶ್ವಾಸಭರಿತ, ದಕ್ಷ, ಬುದ್ಧಿಶಾಲಿ, ಪ್ರಾಮಾಣಿಕ, ಸದಾ ಆನಂದದಿಂದ ಇರುವ ವ್ಯಕ್ತಿಯು ಉದ್ಯೋಗದಲ್ಲಿ ಯಶಸ್ಸುಹೊಂದುತ್ತಾನೆ. ತಾನೊಬ್ಬ ಉತ್ತಮ ವ್ಯಕ್ತಿಯಾಗಿದ್ದರೆ ಸಾಲದು. ಇತರರನ್ನೂ ಅವರವರ ಮಟ್ಟದಿಂದ ಮೇಲಕ್ಕೆತ್ತುವ ಗುಣವನ್ನು ನಾವು ಬೆಳೆಸಿಕೊಳ್ಳಬೇಕು. ಇದೇ ಒಬ್ಬ ನಿಜವಾದ ನಾಯಕನ ಲಕ್ಷಣ. **(ಬರಹ : ಸಂ.)**

ಸ್ವಾಮಿ ವಿವೇಕಾನಂದರ ಜೀವನದರ್ಶನ – ೩

ನಿರೂಪಣೆ: ಸ್ವಾಮಿ ರಾಘವೇಶಾನಂದ ; ಅನುವಾದ : ಸಿ.ಎಸ್.ಮಂಗಳಮ್ಮ; ಮೂಲ ಕಲಾಕೃತಿ : ಪದ್ಮಾ ವಾಸನ್; ವರ್ಣಪಾರದರ್ಶಿಕೆ: ಬಿ.ಕೆ.ಸೋಮಶೇಖರ

ದೇವರ ಸಾಕ್ಷಾತ್ಕಾರ ಪಡೆದ ವ್ಯಕ್ತಿಯೊಬ್ಬರನ್ನು ನೋಡಲೇಬೇಕು ಎಂದು ನರೇಂದ್ರನ ಮನಸ್ಸಿನಲ್ಲಿ ಕಾತರ ಉಂಟಾಯಿತು. ಅವನು ಒಂದು ದಿನ ತನ್ನ ಬಂಧುವಾದ ರಾಮಚಂದ್ರ ದತ್ತನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದನು.

ಒಂದು ದಿನ ನರೇಂದ್ರ, ಶ್ರೀರಾಮಕೃಷ್ಣರು ವಾಸಿಸುತ್ತಿದ್ದ ದಕ್ಷಿಣೇಶ್ವರದ ಕಾಳೀಮಂದಿರಕ್ಕೆ ಹೋದನು.





ಶ್ರೀರಾಮಕೃಷ್ಣರು ತಕ್ಷಣವೇ ಮಂದಹಾಸದಿಂದ ಉತ್ತರಿಸಿದರು.